# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಲಗಿ.

ಸಿ.ಸಿ. ನಂಃ **475/2014**

ಸಿ.ಡಬ್ಲ್ಯೂ- 5
ಪಿ.ಡಬ್ಲ್ಯೂ- 5

**ದಿನಾಂಕಃ 21-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಸ್ವಾತಿ ಪಂಡಿತ |
| ತಂದೆಯ/ಗಂಡನ ಹೆಸರು | : ಸದಾನಂದ |
| ವಯಸ್ಸು | : 61 ವರ್ಷ |
| ಉದ್ಯೋಗ | : ಅಧ್ಯಕ್ಷರು ಕೇಳಕರ ಪ್ರೌಢ ಶಾಲೆ ಕುಲಗೋಡ |
| ವಾಸ ಸ್ಥಳ | : ಧಾರವಾಡ |
| ತಾಲೂಕು | : ಧಾರವಾಡ |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದ:-**

ನಾನು 2003 ರಿಂದ ಇಲ್ಲಿಯವರೆಗೂ ಕೇಳಕರ ಪ್ರೌಢ ಶಾಲೆಯ ಅಧ್ಯಕ್ಷ ಆಗಿದ್ದೇನೆ.

1986 ರಲ್ಲಿ ಪ್ರಕರಣದ ಆರೋಪಿ ನಮ್ಮ ಶಾಲೆಯ ಸಹ ಶಿಕ್ಷಕರಾಗಿ ನೇಮಕರಾಗಿದ್ದು, 2003 ರಲ್ಲಿ ಅವರು ನಮ್ಮ ಶಾಲೆಯ ಮುಖ್ಯೋಪಾದ್ಯಾಯರಾಗಿ ಪದೋನ್ನತಿ ಹೊಂದಿರುತ್ತಾರೆ. ನಂತರ ಆರೋಪಿಯು ನಮ್ಮ ಶಾಲೆಯ ಲೆಕ್ಕಪತ್ರಗಳನ್ನು ಸರಿಯಾಗಿ ಇಟ್ಟಿರುವುದಿಲ್ಲ. 2008 ರಲ್ಲಿ ನಮ್ಮ ಶಾಲೆಯ ಆಡಿಟ್ ಮಾಡಿಸಿದಾಗ ಆರೋಪಿ ರೂ.1,72,901.06/- ಹಣ ದುರ್ಬಳಕೆ ಮಾಡಿಕೊಂಡಿರುವುದು ಕಂಡುಬಂದಿರುತ್ತದೆ. ಈ ವಿಚಾರವಾಗಿ ನನ್ನ ಪತಿ ಚಾಸಾ 1 ರವರು ಕೇಳಕರ ಪ್ರೌಢ ಶಾಲೆಯ ಉಪಾಧ್ಯಕ್ಷರಾಗಿ ಆರೋಪಿ ವಿರುದ್ಧ ಠಾಣೆಯಲ್ಲಿ ದೂರು ಸಲ್ಲಿಸಿರುತ್ತಾರೆ. ಆರೋಪಿ ರೂ. 10 ಸಾವಿರ ಚಿಲ್ಲರೆ ಶಾಲೆಗೆ ಸೇರಿದ ಹಣವನ್ನು ಡಿ ಸಿ ಸಿ ಬ್ಯಾಂಕಗೆ ಶಾಲಾ ಖಾತೆಯಲ್ಲಿ ಜಮಾ ಮಾಡಿರುತ್ತಾರೆ, ಖಜಾನೆಗೆ ರೂ.6,600/- ಗಳನ್ನು ಜಮಾ ಮಾಡಿರುತ್ತಾರೆ, ಆರೋಪಿ ರೂ.1 ಲಕ್ಷ 33 ಸಾವಿರ ಚಿಲ್ಲರೆ ಹಣವನ್ನು ನಮ್ಮ ಶಾಲೆಗೆ ತುಂಬಬೇಕಾಗಿರುತ್ತದೆ.

**(ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಸಾಕ್ಷಿಯು ನ್ಯಾಯಾಲಯದಲ್ಲಿ ನೀಡಿದ ಹೇಳಿಕೆ ಮತ್ತು ಪೊಲೀಸರ ಮುಂದೆ ನೀಡಿದ ಹೇಳಿಕೆಯನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ ರವರಿಂದ:-**

ಆರೋಪಿ ಹಣ ದುರ್ಬಳಕೆ ಬಗ್ಗೆ ನಮಗೆ ತಿಳಿದ ನಂತರ ಆತನನ್ನು ದಿಃ 30-06-2011 ರಂದು ಅಮಾನತ್ತಿನಲ್ಲಿ ಇಟ್ಟಿರುತ್ತೇವೆಂದರೆ ಸರಿ. ಸದರಿ ದಾಖಲಾತಿಯನ್ನು ಸಾಕ್ಷಿಯು ಒಪ್ಪಿಕೊಂಡ ಮೇರೆಗೆ ಅದನ್ನು ನಿಪಿ- 19 ಎಂದು, ಸಾಕ್ಷಿಯ ಸಹಿಯನ್ನು ನಿಪಿ- 19(ಎ) ಎಂದು ಗುರುತಿಸಲಾಯಿತು. 2003-04 ರಿಂದ 2009 ರವೆರೆಗೆ ಆರೋಪಿ ರೂ.1,72,901.06/- ಹಣ ದುರ್ಬಳಕೆ ಮಾಡಿಕೊಂಡಿದ್ದಾರೆಂದು ನಾನು ತನಿಖಾಧಿಕಾರಿಗೆ ಹೇಳಿರುತ್ತೇನೆಂದರೆ ಸರಿ. ದಿಃ 22-04-2012 ರಂದು ನಾನು ತನಿಖಾಧಿಕಾರಿಗೆ ರೂ.10,270/- ಗಳನ್ನು ಡಿ ಸಿ ಸಿ ಬ್ಯಾಂಕ ಕುಲಗೋಡಿನಲ್ಲಿ ಜಮಾ ಮಾಡಿದ್ದು, ರೂ.6,060/- ಗಳನ್ನು ಖಜಾನೆಗೆ ತುಂಬಿದ್ದು ಉಳಿದ ರೂ. 1,56,571/- ಗಳನ್ನು ದುರ್ಬಳಕೆ ಮಾಡಿಕೊಂಡಿದ್ದಾರೆಂದು ಹೇಳಿಕೆ ನೀಡಿರುತ್ತೇನೆಂದರೆ ಸರಿ. ದಿಃ 25-05-2012 ರಂದು ಆರೋಪಿ ಎನ್ ಎಸ್ ಸಿ ಪ್ರಮಾಣ ಪತ್ರದ ದಾಖಲಾತಿಯ ಪ್ರಕಾರ ಆರೋಪಿಯು ರೂ.23,300/- ಗಳನ್ನು ಜಮಾ ಮಾಡಿದ್ದು, ರೂ.5,100/- ಗಳನ್ನು ತನ್ನ ಸ್ವಂತಕ್ಕೆ ಬಳಸಿಕೊಂಡಿದ್ದು ಒಟ್ಟು ರೂ. 1,33,271/- ಗಳನ್ನು ದುರ್ಬಳಕೆ ಮಾಡಿಕೊಂಡಿದ್ದಾರೆಂದು ಹೇಳಿಕೆ ನೀಡಿರುತ್ತೇನೆಂದರೆ ಸರಿ. ಆರೋಪಿ ಸಂಸ್ಥೆಯ ಹಣವನ್ನು ತನ್ನ ಸ್ವಂತಕ್ಕೆ ಬಳಸಿಕೊಂಡು ದುರ್ಬಳಕೆ ಮಾಡಿಕೊಂಡು ಸಂಸ್ಥೆಗೆ ಮೋಸ ಮಾಡಿರುತ್ತಾರೆಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ Sri.ACD ವಕೀಲರಿಂದಃ**

ನಾನು ಸಿವಿಲ್ ಇಂಜಿನಿಯರಿಂಗ ಡಿಪ್ಲೋಮಾ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಧಾರವಾಡದ ಖಾಯಂ ನಿವಾಸಿ ಎಂದರೆ ಸರಿ. ನನ್ನ ಪತಿಯ ಖಾಯಂ ನಿವಾಸ ಧಾರವಾಡ ಎಂದರೆ ಸರಿ. ಶ್ರೀ ಬಲಭೀಮ ವಿದ್ಯಾ ಪ್ರಸಾರಕ ಸಂಸ್ಥೆ ಕುಲಗೋಡಿನಲ್ಲಿದೆ ಎಂದರೆ ಸರಿ. ನಾನು ಸಾಮಾನ್ಯವಾಗಿ ಶ್ರೀ ಬಲಭೀಮ ವಿದ್ಯಾ ಪ್ರಸಾರಕ ಸಂಸ್ಥೆಗೆ ಬರುವುದಿಲ್ಲ ನನ್ನ ಪತಿ ಬರುತ್ತಾರೆಂದರೆ ನಾನು 10 ನೇ ತರಗತಿಯ ವಿದ್ಯಾರ್ಥಿಗಳ ಬಳ್ಕೋಡುಗೆ ಸಮಾರಂಭದಲ್ಲಿ ಶಾಲೆಗೆ ಬರುತ್ತಿದ್ದು, ಸಾಮಾನ್ಯವಾಗಿ 3-4 ತಿಂಗಳ ಅಂತರದಲ್ಲಿ ನಾನು ಆಗಾಗ ಶಾಲೆಗೆ ಬಂದು ಹೋಗಿ ಮಾಡುತ್ತೇನೆ. ನನ್ನ ಪತಿ ಚಾಸಾ 1 ರವರು ತಮ್ಮ ಪಾಟೀ ಸವಾಲಿನಲ್ಲಿ ತಾವೇ ಸಂಸ್ಥೆಯ ಹೆಚ್ಚಿನ ಜವಾಬ್ದಾರಿಗಳನ್ನು ನೋಡಿಕೊಳ್ಳುವುದಾಗಿ ಹೇಳಿರುತ್ತಾರೆಂದರೆ ನಾನು ಸಹ ಬರುತ್ತೇನೆ, ಎರಡೂ ಸರಿಯಾಗಿರುತ್ತದೆ. ಖಾಯಂ ನಾನೇ ಬರುತ್ತಿದ್ದರೆ ಪ್ರಕರಣದಲ್ಲಿ ನಾನೇ ದೂರು ಸಲ್ಲಿಸಿರುತ್ತಿದ್ದೇನೆಂದರೆ ಸರಿಯಲ್ಲ. ನಾನು ಸಂಸ್ಥೆಗೆ ಆಗಾಗ ಬರುವುದಿಲ್ಲ ಎಂದರೆ ಸರಿಯಲ್ಲ.

ಶ್ರೀ ಬಲಭೀಮ ವಿದ್ಯಾಪ್ರಸಾರಕ ಸಂಸ್ಥೆ ಮೂಲತಃ ಲಕ್ಷ್ಮೀಬಾಯಿ ಕೇಳಕರ ಅವರಿಂದ ಸ್ಥಾಪಿಸಲ್ಪಟ್ಟಿದ್ದು, ಆಕೆ ನನ್ನ ಮಾವನ ಅಕ್ಕ ಆಗಿದ್ದು ಆಕೆ ಕುಲಗೋಡಿನ ನಿವಾಸಿಯಾಗಿದ್ದಳು ಮತ್ತು ಆಕೆಗೆ ಯಾವುದೇ ಮಕ್ಕಳು ಆಗಿರುವುದಿಲ್ಲ. ಸಂಸ್ಥೆಯ ನೊಂದಣಿ ಸಂಖ್ಯೆ ನನಗೆ ನೆನಪಿರುವುದಿಲ್ಲ. 1960 ಬಾಂಬೆ ಪಬ್ಲಿಕ್ ಟ್ರಸ್ಟ ಆ್ಯಕ್ಟ ಪ್ರಕಾರ ನಮ್ಮ ಸಂಸ್ಥೆ ನೊಂದಣಿಯಾಗಿದ್ದು ನಂತರ 2003 ರಲ್ಲಿ ಸಂಘ ಸಂಸ್ಥೆ ನೊಂದಣಾಧಿಕಾರಿ ಬೆಳಗಾವಿ ನೊಂದಣಿಯಾಗಿರುತ್ತದೆ. ಬಾಂಬೆ ಪಬ್ಲಿಕ್ ಟ್ರಸ್ಟ ಆ್ಯಕ್ಟ ಈಗ ಜಾರಿಯಲ್ಲಿರುವುದಿಲ್ಲ ಎಂದರೆ ಸರಿ. 2005 ರವರೆಗೂ ಮೂಲ ಆಡಳಿತ ಮಂಡಳಿಯ ಕೈಯಲ್ಲಿ ಸಂಸ್ಥೆ ಇದ್ದು ನಂತರ ನಾವು ಮೂಲ ಆಡಳಿತ ಮಂಡಳಿಯನ್ನು ಕಬ್ಜೆ ನಾವೇ ತೆಗೆದುಕೊಂಡಿರುತ್ತೇವೆಂದರೆ ಮುಂಚೆಯಿಂದಲೂ ನಾವೇ ಕಬ್ಜೆಯಲ್ಲಿರುತ್ತೇವೆ.

ಚಾಸಾ 1 ರವರು ಮೆಮೊರೆಂಡಮ ಆಪ್ ಅಸೋಸಿಯೇಶನ್ ತನಿಖಾಧಿಕಾರಿಗೆ ಚಾರ್ಜ ಶೀಟ ಜೊತೆ ಕೊಟ್ಟಿದ್ದು, ಸದರಿ ಮೆಮೊರೆಂಡಮ ಆಪ್ ಅಸೋಸಿಯೇಶನ್ ಪ್ರಕಾರ ನಮ್ಮ ಶಾಲೆ ಮತ್ತು ಆಡಳಿತ ಮಂಡಳಿ ನಡೆಯಬೇಕು ಎಂದರೆ ಸರಿ. ಸದರಿ ಮೆಮೊರೆಂಡಮ ಆಪ್ ಅಸೋಸಿಯೇಶನ್ ಸಿರಿಯಲ್ ನಂ. 24 ರಲ್ಲಿ ಬ್ಯಾಂಕ ಅಕೌಂಟ ಬಗ್ಗೆ ಎಲ್ಲ ವಿವರಗಳು ನಮೂದಾಗಿರುತ್ತವೆ ಎಂದರೆ ಸರಿ. ನಮ್ಮ ಶಾಲೆಯ ಕಾರ್ಯದರ್ಶಿ ಚಾಸಾ 1 ನನ್ನ ಪತಿ ಆಗಿರುತ್ತಾರೆ. ನಮ್ಮ ಶಾಲೆಯ ಕಾರ್ಯದರ್ಶಿ ಚಾಸಾ 1 ಆಗಿರುವುದಿಲ್ಲ ಬದಲಾಗಿ ತಾಮನ್ನಕರ ಕಾರ್ಯದರ್ಶಿ ಆಗಿದ್ದರು ಎಂದರೆ ಸರಿ. ಸದರಿ ಮೆಮೊರೆಂಡಮ ಆಪ್ ಅಸೋಸಿಯೇಶನ್ ಸಿರಿಯಲ್ ನಂ. 24 ರಲ್ಲಿ ಸಿ ಕೆಳಗಡೆ ಸ್ಕ್ರೆಟರಿಯ ಕರ್ತವ್ಯದ ಬಗ್ಗೆ ವಿವರಗಳು ನಮೂದಾಗಿರುತ್ತವೆ ಎಂದರೆ ಸರಿ. ಸದರಿ ಮೆಮೊರೆಂಡಮ ಆಪ್ ಅಸೋಸಿಯೇಶನ್ ಸಿರಿಯಲ್ ನಂ. 27 ರಲ್ಲಿ ಸ್ಕ್ರೆಟರಿಯವರು ಸಂಸ್ಥೆ ಆಡಿಟ್ ಮಾಡುವ ಬಗ್ಗೆ ವಿವರಗಳು ನಮೂದಾಗಿರುತ್ತವೆ ಎಂದರೆ ಸರಿ. ಸದರಿ ಮೆಮೊರೆಂಡಮ ಆಪ್ ಅಸೋಸಿಯೇಶನ್ ಸಿರಿಯಲ್ ನಂ. 29 ರಲ್ಲಿ ಸ್ಕ್ರೆಟರಿಯವರು ಸಂಸ್ಥೆ ಆಡಿಟ್ ಯಾವಾಗ ಮಾಡಿಸಬೇಕು ಎಂಬುವ ಬಗ್ಗೆ ವಿವರಗಳು ನಮೂದಾಗಿರುತ್ತವೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದು ನ್ಯಾಯಯುತವಾದ ದೃಷ್ಟಿಯಿಂದ ಸಮಯ ನೀಡಲಾಯಿತು.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,
ಮೂಡಲಗಿ.